ಕಡು ಕಷ್ಟದ ಕಾಲವು ನಮ್ಮನ್ನು ಅಧೀರರನ್ನಾಗಿಸಿರುವ ಹೊತ್ತು ಇದು. ಇದರ ಆರಂಭದ ಕಾಲವಂತೂ ನಮ್ಮನ್ನು ಅದೆಷ್ಟು ಕಂಗಾಲಾಗಿಸಿತ್ತು ಎಂದರೆ, ಏನೆಂಥ ಗಳಿಗೆಯನ್ನೂ ಎದುರಿಸುವ ಮನಃಸ್ಥಿತಿಯೊಂದನ್ನು ನಮಗೆ ಗೊತ್ತಿದ್ದೂ ಗೊತ್ತಿಲ್ಲದಂತೆ ಸಾಹಿತ್ಯವು ರೂಪಿಸಿರುತ್ತದೆ ಎನ್ನುವ ಸತ್ಯದ ಬಗ್ಗೆಯೇ ಅನುಮಾನ ಬರುವಷ್ಟು. ಆ ಆಘಾತದಿಂದ ಮನಸ್ಸು ನಿಧಾನವಾಗಿ ಚೇತರಿಸಿಕೊಂಡು ಕಾವ್ಯವೆನ್ನುವ ಮದ್ದಿನ ಕಡೆಗೆ ಹೊರಳುವ ಹೊರಳು ಘಟ್ಟದಲ್ಲಿ ಸಿಕ್ಕಿದ್ದು ಎಸ್. ದಿವಾಕರ್ ಅವರ ಕಾವ್ಯ.

ಕಾವ್ಯವನ್ನು ಜೀವಸೂಚಿ ಎಂದು ಕರೆಯುವುದು ವಿಶೇಷಣವಲ್ಲ, ಅದು ಒಂದು ಜನ ಸಮುದಾಯದ ಒಟ್ಟೂ ಚಲನೆಯ ತೋರುದೀಪ. ಅದರ ಜೀವಂತಿಕೆ, ಆರೋಗ್ಯ, ಲೋಕಗ್ರಹಿಕೆ, ಸಂವೇದನಾಶೀಲತೆ – ಹೀಗೆ ಅದು ತನ್ನನ್ನು ಕಾಪಾಡಿಕೊಳ್ಳುವಲ್ಲಿ, ಉಳಿಸಿ ಬೆಳೆಸಿಕೊಳ್ಳುವಲ್ಲಿ ಎತ್ತ ಸಾಗುತ್ತಿದೆ ಎನ್ನುವುದನ್ನು ತೋರಿಸುವ ಮುನ್ಸೂಚಿ. ಎಷ್ಟೆಲ್ಲ ವಿರೋಧವಿದ್ದರೂ, ಅನಾದರವಿದ್ದರೂ ಕಾವ್ಯ ತಾನು ಮಾಡಬೇಕಾದ ಕೆಲಸವನ್ನು ಮಾಡಿಯೇ ತೀರುತ್ತದೆ, ಹೇಳಬೇಕಾದ್ದನ್ನು ಹೇಳಿಯೇ ಮುಗಿಸುತ್ತದೆ.

ಕಡುಕಷ್ಟದ ಕಾಲ ಎಂದೆ. ಸಾಂಕ್ರಾಮಿಕ ರೋಗವೊಂದು ಚಾಟಿ ಹಿಡಿದು ಜಗತ್ತಿಗೆ ಪಾಠ ಕಲಿಸುವ ರೋಷದಲ್ಲಿರುವಂತೆ ಕಾಣಿಸುತ್ತಿದೆ. ಹೇಳಿ ಹೇಳಿ ಸಾಕಾಗಿ, ರೋಸಿ ಹೋದ ತಾಯಿಯು ಕೊನೆಯ ದಾರಿ ಎನ್ನುವಂತೆ ಮಕ್ಕಳಿಗೆ ದಂಡದ ಮೂಲಕ ತಿಳಿ ಹೇಳುವಂತೆ ಕಾಣಿಸುತ್ತಿರುವ ಈ ಸಂದರ್ಭವು ನೂರಾ ಒಂದನೆಯ ಬಾರಿಗೆ ನಮಗೆ ಅನಾವರಣ ಮಾಡುತ್ತಿರುವ ಸತ್ಯವೆಂದರೆ, ಮನುಷ್ಯನಿಗೆ ಮನುಷ್ಯನೇ ಬಲುದೊಡ್ಡ ಸಾಂಕ್ರಾಮಿಕ ರೋಗ ಎನ್ನುವುದನ್ನು. ಕಾಲ ಮೇಲೆ ಕಲ್ಲು ಹಾಕಿಕೊಂಡು ಒರಲುತ್ತಿರುವ ಮೂರ್ಖ ಅಪರಾಧಿಯಂತೆ ಜಗತ್ತು ಕಾಣಿಸುತ್ತಿದೆ.

**The center can not hold**
**the best lack all conviction**
**while the worst are full of passionate intensity**

ಎನ್ನುವ ಯೇಟ್ಸ್‌ನ ಮಾತುಗಳಾಗಲೀ,

ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ
ದಾರಿ ಸಾಗುವುದೆಂತೋ ನೋಡಬೇಕು

ಎನ್ನುವ ಅಡಿಗರ ಮಾತುಗಳಾಗಲೀ ನಮಗೆ ಇಂದು ಕೇವಲ ರಾಜಕೀಯ, ಸಾಂಸ್ಕೃತಿಕ ಕಾಣ್ಕೆಗಳಾಗಿ ಕಾಣುತ್ತಿಲ್ಲ. ಅವು ಅಮೂರ್ತ ನೆಲೆಗಳಿಂದ ಹೊರ ಬಂದು ಕಣ್ಣಿಗೆ ರಾಚುವ ಮೂರ್ತ ಸತ್ಯಗಳಾಗಿ ಬಿಟ್ಟಿವೆ. ಕಾವ್ಯದ ದೇಶ ಕಾಲಗಳಾಚೆಗಿನ ದರ್ಪಣ ಶಕ್ತಿಯ ಪ್ರತಿಮೆಗಳು ಇವು.

ಇಡೀ ಜಗತ್ತು ಹೊರಪ್ರಯಣದಿಂದ ಒಳಪ್ರಯಾಣದ ಅಗತ್ಯ ಮತ್ತು ಅನಿವಾರ್ಯತೆಯನ್ನು ಕಷ್ಟದಿಂದ ಅರ್ಥ ಮಾಡಿಕೊಳ್ಳುತ್ತಿರುವ, ಅದಕ್ಕೆ ತನ್ನನ್ನು ತಾನು ಸಿದ್ದ ಮಾಡಿಕೊಳ್ಳುತ್ತಿರುವ ನಿರ್ಣಾಯಕ ಗಳಿಗೆಯಲ್ಲಿ ದಿವಾಕರರ ಈ ಒಳಧ್ವನಿಯ ಕಾವ್ಯ ಬಂದಿರುವುದು ಕಾಕತಾಳೀಯವೋ ಎನ್ನುವ ಪ್ರಶ್ನೆ ಕೇಳಿದರೆ ಉತ್ತರಿಸುವುದು ನಿಜಕ್ಕೂ ಕಷ್ಟ.